1081(1495) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಬಿನಿ ಹಾಗೂ ಕಪಿಲಾ ಜಲಾಶಯಗಳ ಎರಡನೇ ಹಂತದ ಕಾಮಗಾರಿಯ ಶಂಕುಸ್ಥಾಪನೆ ಕೆಲಸವನ್ನು ಮಾಡಲಾಗಿರುವುದೇ ?

ಆ) ಮಾಡಿದ್ದಲ್ಲಿ, ಯಾವಾಗ ಮಾಡಲಾಗಿದೆ ಹಾಗೂ ಆ ಸಮಯದಲ್ಲಿ ಸದರಿಯೋಜನೆಗಳಿಗೆ ತಯಾರಿಸಲಾಗಿದ್ದ ಅಂದಾಜು ವೆಚ್ಚದ ಮೊತ್ತವೆಷ್ಟು(ವಿವರ ನೀಡುವುದು) ?

ಇ) ಸದರಿ ಯೋಜನೆಗೆ ಕಾಮಗಾರಿ ಕೆಲಸಗಳನ್ನು ಮಾಡಲಾಗುತ್ತಿರುವುದೇ ? ಇಲ್ಲದಿದ್ದಲ್ಲಿ ಇದಕ್ಕಿರುವ ಅಡ್ಡಿ ಆತಂಕಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು , ಕಬಿನಿ ಎರಡನೇ ಹಂತದ ಕಾಮಗಾರಿಯ ಶಂಕುಸ್ಥಾಪನೆ ಮಾಡಲಾಗಿದೆ.

ಆ) ಎರಡನೇ ಹಂತದ ಕಾಮಗಾರಿಯ ಶಂಕುಸ್ಥಾಪನೆಯನ್ನು 1987 ರಲ್ಲಿ ಮಾಡಲಾಗಿದೆ. ಆ ಸಮಯದಲ್ಲಿ ಸದರಿ ಯೋಜನೆಗಳಿಗೆ ತಯಾರಿಸಲಾಗಿದ್ದ ಅಂದಾಜು ವೆಚ್ಚ ರೂ.250.00 ಕೋಟಿಗಳು.

ಇ) ಸದರಿ ಯೋಜನೆಯನ್ನು ತಾಂತ್ರಿಕ ಕಾರಣಗಳಿಂದ ಪರಿಷ್ಕರಿಸಿ ಪರ್ಯಾಯ ಯೋಜನೆಯನ್ನು ಕಬಿನಿ ಪುನರ್ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿ ರೂ.1233 ಕೋಟಿ ಪರಿಷ್ಕೃತ ಅಂದಾಜು ತಯಾರಿಸಿದೆ. ಕಾಮಗಾರಿಗಳ ಸರ್ವೇ ಕಾರ್ಯ ಪ್ರಗತಿಯಲ್ಲಿದೆ.

1082(1496) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಹಾಗೂ ರಾಜ್ಯದ ಇತರ ಬಾಗಗಳಲ್ಲಿ ನಡೆದಿರುವ ಕೊಲೆ, ದರೋಡೆ, ಅಪಹರಣಗಳ ಪ್ರಕರಣಗಳೆಷ್ಟು: (ವರ್ಷವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಪ್ರಕರಣಗಳಲ್ಲಿ ಎಷ್ಟನ್ನು ಪತ್ತೆ ಹಚ್ಚಲಾಗಿದೆ: (ಪೂರ್ಣ ವಿವರ ನೀಡುವುದು) :

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) **ಬೆಂಗಳೂರು ನಗರ :-**

ವರ್ಷ	ಕೊಲೆ	ದರೋಡೆ	ಅಪಹರಣ
2002	201	27	159
2003	217	46	132
2004	214	36	175

ರಾಜ್ಯದ ಇತರೆ ಭಾಗಗಳಲ್ಲಿ :-

ವರ್ಷ	ಕೊಲೆ	ದರೋಡೆ	ಅಪಹರಣ
2002	1423	156	488
2003	1286	173	352
2004	1307	164	385

ವರ್ಷವಾರು ಮತ್ತು ಜಿಲ್ಲಾವಾರು ವಿವರಗಳನ್ನು ಅನುಬಂಧ ಅ ನಲ್ಲಿ ನೀಡಲಾಗಿದೆ.